**ಓ ಎಸ್ ನಂಃ 325/2014**

**ಡಿ. ಡಬ್ಲ್ಯೂ ಃ 1**

**ದಿಃ 27.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಆರ್ ಸಿ ಕೆ ವಕೀಲರಿಂದ**

**27.** ನನ್ನ ತಾತ ಹಾಗೂ ಅವರ 5 ಜನ ಮಕ್ಕಳಿಗೆ ಪಡ ವಾಪಸ್ ಪಡೆಯಲು ಅರ್ಜಿ ಹಾಕಲು ತೊಂದರೆ ಇರಲಿಲ್ಲ. ಪಡ ವಾಪಸ್ ಆದಾಗ ಈರಮ್ಮ ನವರು ಸರ್ಕಾರಕ್ಕೆ ರೂ. 809/- ಪಾವತಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಾತ ಹಾಗೂ ಅವರ 5 ಜನ ಮಕ್ಕಳಿಗೆ ದಾವಾ ಸ್ವತ್ತುಗಳಲ್ಲಿ ಹಕ್ಕಿಲ್ಲದೆ ಇದ್ದುದ್ದರಿಂದ ಅವರು ಪಡ ವಾಪಸ್ ಹಾಕಿದ್ದು, ಅರ್ಜಿ ಸಲ್ಲಿಸಲಿಲ್ಲ ಎಂದರೆ ಸಾಕ್ಷಿ ಬೋಗ್ಯ ಮಾಡಿರುವುದರಿಂದ ಹಕ್ಕಿರಲಿಲ್ಲ ಎಂದು ನುಡಿಯುತ್ತಾರೆ. ಆ ಬೋಗ್ಯವನ್ನು ನನ್ನ ತಂದೆಯವರು ಅಂಗಡಿ ಗಂಗಯ್ಯ ನವರಿಗೆ ಮಾಡಿರುತ್ತಾರೆ. ದಾವಾ ಸ್ವತ್ತುಗಳನ್ನು 1966-67 ನೇ ಸಾಲಿನಲ್ಲಿ ರೂ. 500/-ಕ್ಕೆ ಬೋಗ್ಯ ಮಾಡಿರುವುದು. ಆ ಬೋಗ್ಯವನ್ನು ಎಲ್ಲ 5 ಜನರು ಬರೆದುಕೊಟ್ಟಿರುತ್ತಾರೆ. ಆ ಬೋಗ್ಯವನ್ನು ಎಷ್ಟು ವರ್ಷಕ್ಕೆ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಆ ಬೋಗ್ಯವನ್ನು ಬರೆದುಕೊಟ್ಟಾಗ ಸ್ವಾಧೀನವನ್ನು ಅಂಗಡಿ ಗಂಗಯ್ಯ ನವರಿಗೆ ಕೊಡಲಾಗಿದೆ. ಆ ಬೋಗ್ಯ ನೋಂದಣಿಯಾಗಿರುತ್ತದೆ. ಆ ಬೋಗ್ಯ ಪತ್ರವನ್ನು ಹಾಜರುಪಡಿಸಿರುವುದಿಲ್ಲ. ಆ ಬೋಗ್ಯವನ್ನು 1975-76 ನೇ ಸಾಲಿನಲ್ಲಿ ಬಿಡಿಸಿಕೊಂಡಿದ್ದೇವೆ. ಆ ಬಾಬ್ತು ಬೋಗ್ಯ ಬಿಡುಗಡೆ ಪತ್ರ ನೋಂದಣಿಯಾಗಿರುತ್ತದೆ. ಆ ಪತ್ರ ನನ್ನ ಬಳಿ ಇದೆ. ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಹೇಳಿದಂತೆ ಬೋಗ್ಯ ಪತ್ರ ಹಾಗೂ ಬೋಗ್ಯ ಬಿಡುಗಡೆ ಪತ್ರ ಆದದ್ದೆ ಇಲ್ಲ ಹಾಗಾಗಿ ನಾನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**28.** ದಾವಾ 1 ನೇ ಸರ್ವೇ ನಂಬರ್ ನಲ್ಲಿ ಈರಮ್ಮ ರವರು ದಿನಾಂಕ ಃ 26.05.1994 ರಲ್ಲಿ 2 ಎಕರೆಯನ್ನು ಶಿವಕುಮಾರ್ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಅವರು ಸಂಪೂರ್ಣ ಹಕ್ಕಿನೊಂದಿಗೆ ಸ್ವಾಧೀನ ಕೂಡ ಶಿವಕುಮಾರ್ ರವರಿಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ಶಿವಕುಮಾರ್ ರವರು ಆ ಸ್ವತ್ತಿನಲ್ಲಿ ಪೆಟ್ರೋಲ್ ಬಂಕ್ ಕೂಡ ಹಾಕಿದ್ದಾರೆ ಎಂದರೆ ಸರಿ. ಆ ರೀತಿ ಮಾರಾಟ ಮಾಡುತ್ತಾರೆ ಎಂಬುದು ನನಗೆ 1993 ರಲ್ಲಿ ಗೊತ್ತಾಗಿತ್ತು. ಆ ರೀತಿ ಮಾರಾಟ ಮಾಡಿದ ವಿರುದ್ಧ ನಾಗರಾಜು ಹಾಗೂ ನರಸೇಗೌಡರು ರಾಮನಗರದ ಸಿವಿಲ್ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದಾರೆ. ಅದರ ಕೇಸ್ ನಂಬರ್

ನನಗೆ ಗೊತ್ತಿಲ್ಲ. ನನಗೆ ಆ ಮಾರಾಟವನ್ನು ಪ್ರಶ್ನಿಸಲು ತೊಂದರೆ ಇರಲಿಲ್ಲ. ಈರಮ್ಮನ ಸ್ವತ್ತಾಗಿದ್ದು ಅದನ್ನು ಶಿವಕುಮಾರ್ ರವರಿಗೆ ಮಾರಾಟ ಮಾಡಿರುವುದರಿಂದ ನಾನು ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ಆ ಸರ್ವೇ ನಂಬರ್ ನಲ್ಲಿ ಉಳಿದ ದಾವಾ 1 ನೇ ಸ್ವತ್ತು ಹಾಗೂ ದಾವಾ 2 ನೇ ಸ್ವತ್ತು ಈರಮ್ಮನ ಸ್ವತ್ತು ಎಂದರೆ ಸಾಕ್ಷಿ ನರಸಿಂಹೇಗೌಡರ ಆಸ್ತಿ ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಈರಮ್ಮನವರು ದಾವಾ ಸ್ವತ್ತನ್ನು ವಾದಿಗೆ ದಿನಾಂಕ 18.06.1994 ರ ವಿಲ್ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಿ ಪಿ 86 ಸದರಿ ವಿಲುನಾಮೆ ಎಂದರೆ ಸಾಕ್ಷಿ ಅದು ಬೋಗಸ್ ಎಂದು ನುಡಿಯುತ್ತಾರೆ. ಆ ವಿಲ್ ನ್ನು ಈರಮ್ಮ ನವರು ಸ್ವಇಚ್ಛೆಯಿಂದ ಬರೆದುಕೊಟ್ಟಿರುವುದು ಎಂದರೆ ಸರಿಯಲ್ಲ. ವಾದಿ ಈರಮ್ಮನವರನ್ನು ಚೆನ್ನಾಗಿ ನೋಡಿಕೊಂಡಿರುವುದರಿಂದ ದಾವಾ ಆಸ್ತಿಗಳನ್ನು ಅವರು ಪ್ರೀತಿಯಿಂದ ಅವರಿಗೆ ಬರೆದುಕೊಟ್ಟಿರುವುದು ಎಂದರೆ ಸರಿಯಲ್ಲ. ಆ ವಿಲ್ ನ್ನು ದಿನಾಂಕ : 02.07.1994 ರಲ್ಲಿ ಮಾಗಡಿ ನೋಂದಣಿ ಕಚೇರಿಯಲ್ಲಿ ಸಾಕ್ಷಿಗಳ ಸಮ್ಮುಖದಲ್ಲಿ ನೋಂದಣಿ ಆಗಿದೆ ಎಂದರೆ ಸರಿಯಲ್ಲ.

**29.** ಸದರಿ ಈರಮ್ಮ ದಿನಾಂಕ : 31.07.1994 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಈರಮ್ಮ ಮೃತಪಟ್ಟ ನಂತರ ವಾದಿ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈರಮ್ಮ ಮೃತಪಡುವ ತನಕ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ನಮ್ಮ ಕುಟುಂಬದಲ್ಲಿ ಯಾವುದೇ ವಿವಾದ ಇರಲಿಲ್ಲ ಎಂದರೆ ಸರಿ. ಅವರು ಮೃತಪಟ್ಟ ನಂತರ ಆ ರೀತಿ ಅರ್ಜಿ ಸಲ್ಲಿಸಿದಾರೆ. ಆ ವಿಲ್ ಆಗಿರುವುದು ನಮ್ಮ ಕುಟುಂಬದ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿ. ಆ ರೀತಿ ಗಮನಕ್ಕೆ ಬಂದಾಗ ಆ ವಿಲ್ ನ್ನು ಪ್ರಶ್ನಿಸಿ ದಾವೆ ಹೂಡಿದ್ದೇವೆ. ಆ ದಾವೆಯ ಸಂಖ್ಯೆ ಹಾಗೂ ನ್ಯಾಯಾಲಯ ಯಾವುದು ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ನಾಗರಾಜುಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಕೂಡ ಆ ದಾವೆಯಲ್ಲಿ ಸೇರಿಕೊಂಡು ಪ್ರಶ್ನಿಸಿದ್ದೇನೆ. ಆ ದಾವೆ ಏನಾಯಿತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಈ ದಾವೆ ಬಿಟ್ಟು ಬೇರೆ ದಾವೆಗಳು ಏನಾಗಿದೆ ಎಂದು ನನಗೆ ಗೊತ್ತಿಲ್ಲ.

**30.** ವಾದಿ ಹಾಗೂ ವಾದಿಯ ಗಂಡನ ದೌರ್ಬಲ್ಯವನ್ನು ದುರುಪಯೋಗಪಡಿಸಿಕೊಂಡು ಕಂದಾಯ ದಾಖಲೆಗಳಲ್ಲಿ ಹಕ್ಕು ಸ್ಥಾಪನೆ ಪ್ರಯತ್ನಪಟ್ಟಿವು ಎಂದರೆ ಸಾಕ್ಷಿ ಅವರು ಬಲಶಾಲಿಗಳಾಗಿದ್ದರು ಹಾಗೂ ಅದು ಸರಿಯಲ್ಲ ಎಂದು ನುಡಿಯುತ್ತಾರೆ. ಈರಮ್ಮ ಮೃತಪಟ್ಟ ನಂತರ ನರಸೇಗೌಡರು ತಹಶೀಲ್ದಾರ್ ರವರ ಜೊತೆ ಒಳಸಂಚು ಮಾಡಿ

ಮೊದಲನೆ ಸಲ ಖಾತೆ ಮಾಡಿಸಿಕೊಳ್ಳುತ್ತಾರೆ ಎಂದರೆ ಅವರ ಹೆಸರಿಗೆ ಮಾಡಿಸಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಈ ವಿಚಾರ ಗೊತ್ತಾದಾಗ ವಾದಿ ಮಾನ್ಯಉಚ್ಚ ನ್ಯಾಯಾಲಯಕ್ಕೆ ರಿಟ್ ಪಿಟಿಷನ್ ನಂಬರ್ 24560/97 ರ ಪ್ರಕಾರ ಅರ್ಜಿ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಅರ್ಜಿ ಆದೇಶದಲ್ಲಿ ತಹಶೀಲ್ದಾರ್ ರವರಿಗೆ ಪುನರ್ ಪರಿಶೀಲಿಸಲು ಆದೇಶವಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಎಂ ಆರ್ 21/2002-03 ರಂತೆ ವಾದಿಯ ಹೆಸರಿಗೆ ದಾವಾ ಸ್ವತ್ತಿನ ಖಾತೆಯಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

**31.** ಆ ಆದೇಶದ ವಿರುದ್ದ ನರಸೇಗೌಡರು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುತ್ತಾರೆ ಎಂದರೆ ಸರಿ. ಆ ಮೇಲ್ಮನವಿ ವಿಚಾರಣೆಯಲ್ಲಿರುವಾಗ ನರಸೇಗೌಡರು ಒಂದು ಮೆಮೋ ಸಲ್ಲಿಸಿ ಆ ಮೇಲ್ಮನವಿಯನ್ನು ವಾಪಸ್ ಪಡೆದುಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 13 ರಲ್ಲಿ ಸದರಿ ನರಸೇಗೌಡರ ಸಹಿ ಇದೆ ಎಂದು ಸಾಕ್ಷಿ ನೋಡಿ ಹೇಳಿರುತ್ತಾರೆ. ಅದನ್ನು **ನಿ ಪಿ 13 (ಎ)** ಎಂದು ಗುರುತಿಸಲಾಯಿತು. 2010-11 ರ ತನಕ ಖಾತೆ ವಾದಿಯ ಹೆಸರಿನಲ್ಲಿ ಮುಂದುವರೆಯುತ್ತದೆ ಎಂದರೆ ಸರಿ. ಆ ವಿಲ್ ಆಧಾರದಲ್ಲಿ ವಾದಿ ಹೆಸರಿಗೆ ಖಾತೆ ಆಗಿ ಅವರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಮೃತಪಡುವ ತನಕ ಈರಮ್ಮನವರು ಸ್ವಾಧೀನದಲ್ಲಿದ್ದು, ಅವರು ಮೃತಪಟ್ಟ ನಂತರ ವಾದಿ ಸದರಿ ವಿಲ್ ನ ಆಧಾರದಲ್ಲಿ ಸ್ವಾಧೀನಕ್ಕೆ ಬಂದಿರುತ್ತಾರೆ ಎಂದರೆ ಸಾಕ್ಷಿ ನಾವೇ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಈರಮ್ಮನ ಸ್ವತ್ತಾಗಿದ್ದುದ್ದರಿಂದ ಹಾಗೂ ನರಸಿಂಹೇಗೌಡರ ಕುಟುಂಬಕ್ಕೆ ಹಕ್ಕು ಹಿತಾಸಕ್ತಿ ಇಲ್ಲದೆ ಇದ್ದುದ್ದರಿಂದ ಮೇಲ್ಕಂಡ ಪಡ ವಾಪಸಾತಿ ಆದೇಶ, ಶಿವಕುಮಾರ್ ರವರಿಗೆ ಬರೆದುಕೊಟ್ಟ ಕ್ರಯಪತ್ರ ಹಾಗೂ ವಾದಿಗೆ ಬರೆದುಕೊಟ್ಟ ವಿಲ್ ನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

**32.** ಈಗ ದಾವಾ ಸ್ವತ್ತು ನರಸಿಂಹೇಗೌಡರ ಹೆಸರಿನಲ್ಲಿದೆ. ಆ ಬಗ್ಗೆ ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ನಟರಾಜ್ ರವರು ನನಗೆ ಗೊತ್ತಿಲ್ಲ. ವಾದಿ ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಯಾರು ಪಕ್ಷಗಾರರಿದ್ದಾರೆ ಹಾಗೂ ದಾವಾ ಕಾರಣವೇನು ಎಂದು ಓದಿಸಿ ಕೂಡ ತಿಳಿದುಕೊಂಡಿಲ್ಲ. 2010 ರಲ್ಲಿ ನರಸೇಗೌಡರು ಮತ್ತೆ ಒಳಸಂಚು ಮಾಡಿ ಅವರ ಹೆಸರಿಗೆ ಖಾತೆ ಮಾಡಿಸಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಖಾತೆ ಮಾಡಿಸಿಕೊಂಡು

ತಕ್ಷಣ ಸದರಿ ನಟರಾಜು ರವರಿಗೆ ದಾವಾ 1ನೆ ಸ್ವತ್ತಿನ ಬಾಬ್ತು ನಾಮಕಾವಸ್ಥೆಯ ಕ್ರಯಪತ್ರವನ್ನು ಸೃಷ್ಟಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ಗೊತ್ತಾದ ತಕ್ಷಣ ವಾದಿ, ನರಸೇಗೌಡರು , ನಟರಾಜು ಹಾಗೂ ನಮ್ಮ ಮೇಲೆ ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ.

33. ಈ ದಾವೆಯ ಸಮನ್ಸ ಜಾರಿಯಾದಾಗ ನಟರಾಜ್ ಗೆ ಬರೆದುಕೊಟ್ಟ ಕ್ರಯಪತ್ರದ ಬಗ್ಗೆ ನನಗೆ ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ನನಗೆ 2017 ರಲ್ಲಿ ನಟರಾಜ್ ಕಡೆಯವರು ರೂ. 10 ಲಕ್ಷ ಹಣ ಕೊಡುತ್ತೇವೆ, ಸಹಿ ಮಾಡು ಎಂದು ಹೇಳಿದಾಗ ಆ ಕ್ರಯಪತ್ರದ ಬಗ್ಗೆ ಗೊತ್ತಾಯಿತು. ಅವರು ಪತ್ರಕ್ಕೆ ನೋಂದಣಿ ಕಚೇರಿಗೆ ಬಂದು ಸಹಿ ಮಾಡು ಎಂದು ಹೇಳಿದರು. ಆ ಕ್ರಯಪತ್ರವನ್ನು ಈ ನ್ಯಾಯಾಲಯದಲ್ಲೆ 2017 ರಲ್ಲಿ ಪ್ರಶ್ನಿಸಿದ್ದೇವೆ. ಅದರ ಕೇಸ್ ನಂಬರ್ ನನಗೆ ಗೊತ್ತಿಲ್ಲ. ಆ ಬಾಬ್ತು ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ. ಆ ಕ್ರಯಪತ್ರವನ್ನು ನಾನು ಪ್ರಶ್ನಿಸದೆ ಇರುವುದರಿಂದ ನನ್ನ ಬಳಿ ಯಾವುದೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನನ್ನ ಕುಟುಂಬಕ್ಕೂ ಹಾಗೂ ನರಸೇಗೌಡರ ಕುಟುಂಬಕ್ಕೂ ಹಕ್ಕು ಹಿತಾಸಕ್ತಿ ಇಲ್ಲದೆ ಇದ್ದುದ್ದರಿಂದ ಆ ಕ್ರಯಪತ್ರವನ್ನು ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ.

34. ಐಟಂ ನಂಬರ್ 1 ರ ಪೂರ್ವಕ್ಕೆ ಮುಸ್ಲಿಂ ಸಮುದಾಯದವರ ಜಮೀನಿದ್ದು, ಹೆಸರು ಗೊತ್ತಿಲ್ಲ. ಉತ್ತರಕ್ಕೆ ನ್ಯಾಷನಲ್ ಹೈವೇ ಇದೆ. ದಾವಾ ಐಟಂನ ಪೂರ್ವಕ್ಕೆ ಈಗ ಒಂದು ರಸ್ತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಉತ್ತರಕ್ಕೆ ಇರುವ ಆ ನ್ಯಾಷನಲ್ ಹೈವೇಯನ್ನು 2007 ನೇ ಇಸವಿಯಲ್ಲಿ ಅಗಲೀಕರಣ ಮಾಡಿದ್ದಾರೆ ಎಂದರೆ ಸರಿ. ಅದಕ್ಕೆ ದಾವಾ 1ನೇಸ್ವತ್ತಿನಲ್ಲಿ 404 ಚದರ ಮೀಟರ್ ಅಂದರೆ ಅಂದಾಜು 2 ಗುಂಟೆ ಜಮೀನನ್ನು ಭೂ ಸ್ವಾಧೀನಕ್ಕೆ ನೋಟೀಫಿಕೇಶನ್ ಮಾಡುತ್ತಾರೆ ಎಂದರೆ ಸರಿ. ಸಾಕ್ಷಿ ನಿ ಪಿ 74 ನ್ನು ಸಾಕ್ಷಿಗೆ ತೋರಿಸಿದಾಗ ಅದರಲ್ಲಿ ವಾದಿ ಹೆಸರು ಹಾಗೂ ದಾವಾ 1ನೇ ಸರ್ವೇ ನಂಬರ್ 404 ಚದರ ಮೀಟರ್ ಎಂಬ ನಮೂದು ಇದೆ, ಆದರೆ ಅದನ್ನು ಡೂಪ್ಲಿಕೇಟ್ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

35. ವಾದಿಗೆ ಆ ರೀತಿ ತಿಳುವಳಿಕೆ ನೋಟೀಸ್ ಕೊಟ್ಟಾಗ ನಾವು ತಕರಾರು ಹಾಕಲು ನಮಗೆ ಅದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸರ್ಕಾರದವರು ಯಾರ ಹೆಸರಿಗೆ ಖಾತೆ ಇದೆ, ಅವರ ಹೆಸರಿಗೆ ತಿಳುವಳಿಕೆ ನೋಟೀಸ್ ಕೊಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 75 ರಂತೆ ವಾದಿ ಭೂ ಸ್ವಾಧೀನಾಧಿಕಾರಿಗೆ ತಕರಾರು ಸಲ್ಲಿಸುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ

ರೀತಿ ಭೂಸ್ವಾಧೀನ ಮಾಡಿಕೊಳ್ಳುವ ಮುಂಚೆ ದಾವಾ ಸ್ವತ್ತನ್ನು ಅಳತೆ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅಜುಬಾಜುನವರನ್ನು ವಿಚಾರಣೆ ಮಾಡಿ ವಾದಿಯೆ ದಾವಾ 1ನೇ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದು ಮಹಜರ್ ಮಾಡಿದ್ದಾರೆ ಎಂದರೆ ಸಾಕ್ಷಿ ನಾವೇ ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಸರ್ವೆ ನಂಬರ್ 131/4 ರ 37 ಗುಂಟೆಯಲ್ಲಿ ನಾನು ಸ್ವಾಧೀನದಲ್ಲಿದ್ದೇನೆ. ನಾನು ಆ ಮುಸ್ಲಿಂ ವ್ಯಕ್ತಿಗಳಿರುವ ಕಡೆ ಪೂರ್ವ ದಕ್ಷಿಣಾರ್ಧ ಭಾಗದಲ್ಲಿ ಸ್ವಾಧೀನದಲ್ಲಿ ಇದ್ದೇನೆ. ಅದರಲ್ಲಿ ಹೊಟೇಲ್ ಮಾಡಿ ಬಾಡಿಗೆಗೆ ಕೊಟ್ಟಿದ್ದೇನೆ. ಅವರ ಹೆಸರು ನನಗೆ ಗೊತ್ತಿಲ್ಲ. ಪುನಃ ಕೇಳಿದಾಗ ಆಲೋಚಿಸಿ, ಸ್ವಾಮಿನಾಥನ್ ಎಂದು ನುಡಿಯುತ್ತಾರೆ. ಬಾಡಿಗೆ ರೂ.1200/-. ಅವರು ಬಾಡಿಗೆ ನಗದಾಗಿ ಪಾವತಿಸುತ್ತಾರೆ. ಅದರಲ್ಲಿ ಕಟ್ಟಡ ಕಟ್ಟಿದ್ದೀರಾ ಎಂದರೆ ಸಾಕ್ಷಿ ಮುಖ್ಯ ರಸ್ತೆಯ ಪಕ್ಕ ಅಡುಗೆ ಮಾಡಿ ವ್ಯಾಪಾರ ಮಾಡಿಕೊಂಡು ಹೋಗುತ್ತಾರೆ ಎಂದು ನುಡಿಯುತ್ತಾರೆ. ನಾನು ಅಲ್ಲಿ ವ್ಯವಸಾಯ ಮಾಡುತ್ತಿಲ್ಲ. ನಾನು ಸ್ವಾಧೀನದಲ್ಲಿ ಇಲ್ಲದೆ ಇದ್ದುದ್ದರಿಂದ ಆ ಭೂ ಸ್ವಾಧೀನ ಸರ್ವೆಗೆ ಬಂದಾಗ ನನಗೆ ಗೊತ್ತಾಗಿಲ್ಲ ಎಂದರೆ ಸರಿ.

**36.** ನನ್ನ ತಾತ ಹಾಗೂ ಅವರ 5 ಜನರ ಮಕ್ಕಳಿಗೆ ಹಾಗೂ ನನಗೆ ದಾವಾ ಸ್ವತ್ತಿನಲ್ಲಿ ಯಾವುದೆ ಹಕ್ಕು, ಹಿತಾಸಕ್ತಿ ಹಾಗೂ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮಾಲೀಕರು ವಾದಿಯೆ ಈಗ ಸಂಪೂರ್ಣ ಮಾಲೀಕರಾಗಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ನರಸೇಗೌಡರು ಖಾತೆ ಮಾಡಿಸಿಕೊಂಡು ನಟರಾಜ್ ಗೆ ಕ್ರಯಪತ್ರ ಬರೆದುಕೊಟ್ಟಿರುವುದು ಒಳಸಂಚು ಮಾಡಿ ಎಂದರೆ ಸರಿ. ಹಾಗಾಗಿ ವಾದಿ ಅವರಿಗೆ ಇರುವ ಹಕ್ಕಿನ ಆಧಾರದಲ್ಲಿ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನನಗೆ ದಾವಾ ಸ್ವತ್ತಿನ ಹಕ್ಕು, ಸ್ವರೂಪ ಹಾಗೂ ಒಡೆತನ ಹಾಗೂ ದಾವಾ ಸ್ವತ್ತಿನಲ್ಲಿ ಇರುವ ವಿವಾದಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಆದ್ದರಿಂದ ನಾನು ಅಪೂರ್ಣ ಮಾಹಿತಿ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಗೂ ನರಸೇಗೌಡರು ಒಳಸಂಚು ಮಾಡಿ ವಾದಿಯ ಆಸ್ತಿಯನ್ನು ಕಬಳಿಸಲು ದಾಖಲೆ ಸೃಷ್ಟಿಸಿಕೊಂಡು ಅವರಿಗೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಿ ಡಿ 1 ರಿಂದ 3 ಹಾಗೂ ನಿ ಡಿ 5 ಮತ್ತು ನಿ ಡಿ 6 ನ್ನು ಸರ್ಕಾರಿ ಅಧಿಕಾರಿಗಳ ಜೊತೆ ಸೇರಿಕೊಂಡು ನನ್ನ ಕುಟುಂಬದವರು ಸೃಷ್ಟಿ ಮಾಡಿಕೊಂಡಿರುವುದು ಎಂದರೆ ಸರಿಯಲ್ಲ. ಈ ದಾವಾ ಆಸ್ತಿಗಳನ್ನು ಕಬಳಿಸಲು ಸದರಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುವುದು ಹಾಗೂ ನಾನು ಹೇಳಿದಂತಹ ಸ್ವತ್ತುಗಳಿಗೆ ದಾಖಲೆಗಳಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದಂತಹ 12 ಸ್ವತ್ತುಗಳಿಗೆ ಯಾವುದೆ

ದಾಖಲೆ ನಮ್ಮ ಸ್ವತ್ತು ಅಲ್ಲದೆ ಇರುವುದರಿಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಅವರಿಗೆ ತೊಂದರೆ ಕೊಡಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**14 ನೇ ಪ್ರತಿವಾದಿ ಪರ ವಕೀಲರ ಪಾಟೀ ಸವಾಲಿಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**